**ಓ.ಎಸ್. ನಂ. 69/2018** **ಡಿ.ಡಬ್ಲ್ಯೂ- 3**

**ಸಾಕ್ಷಿಯನ್ನು ದಿನಾಂಕ 8.11.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಎನ್.ಆರ್ ವಕೀಲರಿಂದಃ**

ಕಾಡಸೂರಿನಿಂದ ಆಲನಹಳ್ಳಿ ಗ್ರಾಮಕ್ಕೆ 7-8 ಕಿ.ಮೀ ದೂರವಾಗುತ್ತದೆ. ನನಗೆ ವಾದಿಯರು ಯಾರೆಂದು ಗೊತ್ತಿರುವುದಿಲ್ಲ. ವಾದಿಯರು ಏನು ದಾವೆ ಹಾಕಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ. ವಾದಿಯರು ಯಾರ ವಿರುದ್ದ ದಾವೆ ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಆಸ್ತಿಯ ಸರ್ವೆ ನಂಬರ್ ಹಿಂದೆ 11 ಆಗಿದ್ದು ಈಗ 39 ಆಗಿರುತ್ತದೆ. ಸದರಿ ಸರ್ವೆ ನಂ.11ರ ದಾಖಲೆಯನ್ನು ನಾನು ನೋಡಿರುವುದಿಲ್ಲ. ನನ್ನ ಜಮೀನಿನ ಪಕ್ಕದಲ್ಲಿ ಸರ್ವೆ ನಂ.11 ಇರುತ್ತದೆ. ನನ್ನ ಜಮೀನಿನ ಸರ್ವೆ ನಂಬರ್ ಸಹ 11 ಆಗಿರುತ್ತದೆ. ಸರ್ವೆ ನಂ.11 ರಲ್ಲಿ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.11 ಯಾವಾಗ ದುರಸ್ತಿಯಾಗಿರುತ್ತದೆ ಎಂದು ದುರಸ್ತಿಯಾಗಿರುವ ದಾಖಲೆಯನ್ನು ನಾನು ನೋಡಿರುವುದಿಲ್ಲ. ನನ್ನ ಜಮೀನಿನ ಪೂರ್ವಕ್ಕೆ ಪ್ಯಾರಿಸ್ ಸೊಸೈಟಿಯ ಜಮೀನು, ಪಶ್ಚಿಮಕ್ಕೆ ಮರಿಮಂಚಯ್ಯ ಮತ್ತು ಸಣ್ಣಯ್ಯರವರ ಜಮೀನು, ಉತ್ತರಕ್ಕೆ ಜವರಯ್ಯನವರ ಜಮೀನು, ದಕ್ಷಿಣಕ್ಕೆ ನನ್ನ ತಾತನಾದ ಬಸವಯ್ಯನವರ ಜಮೀನು ಇರುತ್ತದೆ. ದಕ್ಷಿಣಕ್ಕೆ ಇರುವ ನನ್ನ ತಾತನ ಜಮೀನಿನ ಸರ್ವೆ ನಂ.11 ಆಗಿರುತ್ತದೆ. ಮೇಲೆ ಹೇಳಿದ ಪ್ಯಾರಿಸ್ ಸೊಸೈಟಿಯ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಮೇಲೆ ಹೇಳಿದ ಮರಿಮಂಚಯ್ಯ ಮತ್ತು ಸಣ್ಣಯ್ಯರವರ ಜಮೀನಿನ ಸರ್ವೆ ನಂ.11 ಆಗಿರುತ್ತದೆ. ಸರ್ವೆ ನಂ.11 ರಲ್ಲಿ ನನಗೆ ಜಮೀನು ಇರುತ್ತದೆ ಎಂದು ತೋರಿಸಲು ಪಹಣಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಂದೆಯ ಸಹೋದರರು ವಿಭಾಗ ಮಾಡಿಕೊಂಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನನ್ನು ಸಾಕ್ಷಿ ನುಡಿಯಲು 3ನೇ ಪ್ರತಿವಾದಿಯು ಕರೆದುಕೊಂಡು ಬಂದಿರುತ್ತಾರೆ. ಅವರು ನನ್ನ ಸಂಬಂಧಿಕರಾಗಿರುವುದಿಲ್ಲ. 3ನೇ ಪ್ರತಿವಾದಿಯು ಹೇಳಿದಂತೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ವಿಚಾರ ಗೊತ್ತಿರದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.